ಸಿ.ಸಿ ನಂಬ್ರ: 1047/2023
ಪಿ.ಡಬ್ಲ್ಯೂ : 1

ದಿನಾಂಕ: 22 -03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್.ಸಿ.ಎಮ್. ವಕೀಲರಿಂದ

1. ನಾನು ಬೀರೆಶ್ವರ ಕೋಪರೇಟಿವ್ ಸೊಸೈಟಿಯಲ್ಲಿ ಬ್ರಾಂಚ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಕುಂದಾಪುರದಲ್ಲಿ ಬೀರೆಶ್ವರ ಕೋಪರೇಟಿವ್ ಸೊಸೈಟಿಯ ಎಷ್ಟು ಬ್ರಾಂಚ್ ಗಳು ಇರುತ್ತವೆ ಎಂದರೆ ಸಾಕ್ಷಿ 225 ಬ್ರಾಂಚ್ ಗಳು ಇರುತ್ತವೆ ಎಂದು ನುಡಿಯುತ್ತಾರೆ. ನಾನು ಕೋಟೇಶ್ವರದ ಬ್ರಾಂಚ್ ನಲ್ಲಿ 3 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಜರೀನಾ ನಿಸಾರಹಮ್ಮದ್ ಆರೋಪಿಯ ಹೆಂಡತಿ ಸಾಲ ವಪಡೆದಿರುತ್ತಾರೆ. ಆರೋಪಿತ ಸಾಲ ಪಡೆದಿಲ್ಲ. ಹೆಂಡತಿಗೆ ಭದ್ರತೆ ಕೊಟ್ಟಿರುತ್ತಾರೆ. ಸಚಿನ್ ಪೈ ಮ್ಯಾನೇಜರ್ ಇರುವಾಗ ಸಾಲ ಪಡೆದಿರುತ್ತಾರೆ.

2. ಅಮೂಲ್ಯ ಮೈಕ್ರೂ ಗ್ರೂಪ್ ಲೋನ್ ತೆಗೆದುಕೊಂಡಿರುತ್ತಾರೆ. ಅಮೂಲ್ಯ ಮೈಕ್ರೂ ಗ್ರೂಪ್ ಲೋನ್ ಎಂಬುದನ್ನು ಹೆಂಗಸರಿಗೆ ಕೊಡುವುದು ಎಂದರೆ ಸರಿ. ಅದರಲ್ಲಿ ಗಂಡಸರಿಗೆ ಸಾಲವನ್ನು ಕೊಡುವುದಿಲ್ಲ ಎಂದರೆ ಸರಿ. ದಿನಾಂಕ 26-11-2020 ರಂದು ಸಾಲವನ್ನು ಕೊಟ್ಟಿರುತ್ತೇವೆ. ಸಾಲ ಕೊಡುವಾಗ ಲಾಕ್ ಡೌನ್ ಇತ್ತು ಎಂದರೆ ಸರಿ. ಆಗ ಮನೆಯಿಂದ ಯಾರು ಹೊರಗಡೆ ಬರುತ್ತಿರಲಿಲ್ಲ, ಸೊಸೈಟಿ ಕಾರ್ಯ ನಿರ್ವಹಿಸುತ್ತಿತ್ತು ಎಂದು ನುಡಿಯುತ್ತಾರೆ.

3. 2020 ರಲ್ಲಿ ಕೇಂದ್ರ ಸರ್ಕಾರ ಸುತ್ತೋಲೆ ಹೊರಡಿಸಿ ಯಾವುದೇ ಬಡ್ಡಿ ಹೊರಿಸಬಾರದು ಎಂದು ಹೊರಡಿಸಿತ್ತು ಎಂದರೆ ಸರಿ. ಸಾಲ ಕೊಡುವಾಗ ಭದ್ರತೆಗಾಗಿ ಚೆಕ್ ಪಡೆಯುತ್ತೇವೆ ಎಂದರೆ ಸರಿ. ಸಾಲ ಕೊಡುವಾಗ ಭದ್ರತೆಗಾಗಿ ಆರೋಪಿಯಿಂದ ಚೆಕ್ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಆರೋಪಿತ ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಮೂಲ ಸಾಲದಾರರು 15 ಕಂತುಗಳನ್ನು ಕಟ್ಟಿರುತ್ತಾರೆ.

4. ಆರೋಪಿತನ ಮೇಲೆ ಪ್ರಕರಣವನ್ನು ದಾಖಲಿಸಲು ಯಾರು ಹೇಳಿರಲಿಲ್ಲ. ನಾನು ಪ್ರಕರಣ ದಾಖಲಿಸಲು ಯಾವುದೇ ಅತೋರೈಜೆಷನ್ ಲೆಟರ್ ತೆಗೆದುಕೊಂಡಿರಲಿಲ್ಲ. ಪ್ರಕರಣ ಸಲ್ಲಿಸಬೇಕು ಎಂದು ನಮ್ಮ ಕಚೇರಿಯ ನಡಾವಳಿ ಸಭೆಯಲ್ಲಿ ನಿರ್ಣಯವಾಗಿರುವುದಿಲ್ಲ.

ನಿ.ಪಿ.1 ರಲ್ಲಿರುವ ಹಸ್ತಾಕ್ಷರ ಆರೋಪಿತ ಬರೆದುಕೊಟ್ಟಿರುತ್ತಾನೆ. ಸಹಿಯನ್ನು ಬರೆದಿರುವ ಶಾಯಿಗೂ ಉಳಿದ ಮಾಹಿತಿ ಬರೆದಿರುವ ಅಕ್ಷರಕ್ಕೆ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಸಾಲ ಕೊಡುವಾಗ ಭದ್ರತೆಗಾಗಿ ಖಾಲಿ ಚೆಕ್ ನ್ನು ಪಡೆಯುತ್ತೇವೆ ಎಂದರೆ ಸರಿ. ಖಾಲಿ ಚೆಕ್ ನ್ನು ತೆಗೆದುಕೊಂಡು ಅದರಲ್ಲಿರುವ ಹಸ್ತಾಕ್ಷರ ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತ ಎಷ್ಟು ಓದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆರೋಪಿತ ಆಂಗ್ಲ ಭಾಷೆಯಲ್ಲಿ ಬರೆಯುವ ಬಗ್ಗೆ ಗೊತ್ತಿರುವುದಿಲ್ಲ.

5. ಆರೋಪಿತನ ಲೋನ್ ಎಕ್ಸ್ಟ್ರಾಕ್ಟ್ ನ್ನು ಈ ಪ್ರಕರಣ ದಾಖಲಿಸುವಾಗ ಹಾಜರು ಪಡಿಸಿರಲಿಲ್ಲ. ನಾನು ಬ್ರಾಂಚ್ ಮ್ಯಾನೆಜರ್ ಅಲ್ಲ ಹಾಗೂ ಪ್ರಕರಣ ನಡೆಸಲು ಯಾವುದೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.
ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ